ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ
**KARNATAK UNIVERSITY, DHARWAD**
"NAAC ACCREDITED WITH "A" GRADE 2014"
ಪರೀಕ್ಷಾ ಸಾಮಾನ್ಯ ಆಡಳಿತ ವಿಭಾಗ,
**Examination G.A.D. Section**

ಪಾವಟೆನಗರ, ಧಾರವಾಡ
Pavate Nagar, Dharwad

No.KU/Exam/GAD/2022-23/1233 ದಿನಾಂಕ: 17.02.2023

# ಸುತ್ತೋಲೆ

ವಿಷಯ : ಮಾರ್ಚ/ಎಪ್ರಿಲ್–2023 ರಲ್ಲಿ ಜರುಗುವ ರಾಷ್ಟ್ರೀಯ ಶಿಕ್ಷಣ ನೀತಿ (NEP) ಅಡಿಯಲ್ಲಿ ಬರುವ ಎಲ್ಲ ಸ್ನಾತಕ 1 & 3 ನೇ ಸೆಮೆಸ್ಟರ್ ಪರೀಕ್ಷಾ ವೇಳಾಪಟ್ಟಿಯ ಕುರಿತು.

ಉಲ್ಲೇಖ : 1. KUD/EXAM/GAD/2022-23/1221 Dt:14.02.2023.
2. KUD/EXAM/GAD/2022-23/1224 Dt:16.02.2023.

** **

ಮೇಲ್ಕಾಣಿಸಿದ ವಿಷಯಕ್ಕೆ ಸಂಬಂಧಿಸಿದಂತೆ, ಕ.ವಿ.ವಿ. ವ್ಯಾಪ್ತಿಯ ಎಲ್ಲ ಸ್ನಾತಕ ಮಹಾವಿದ್ಯಾಲಯಗಳ ಪ್ರಾಚಾರ್ಯರಿಗೆ ಈ ಮೂಲಕ ತಿಳಿಸುವುದೇನೆಂದರೆ, ಉಲ್ಲೇಖಿತ '1' ಮತ್ತು '2' ರ ವೇಳಾಪಟ್ಟಿಗಳನ್ವಯ NON-CBCS ಹಾಗೂ CBCS 1, 3 ಮತ್ತು 5 ನೇ ಸೆಮೆಸ್ಟರ್ ರೆಗ್ಯೂಲರ್/ರಿಪೀಟರ್ಸ್ ವಿದ್ಯಾರ್ಥಿಗಳಿಗೆ ಲಿಖಿತ ಪರೀಕ್ಷಾ ವೇಳಾಪಟ್ಟಿಯನ್ನು ಪ್ರಕಟಿಸಲಾಗಿರುತ್ತದೆ.

ಮುಂದುವರೆದು, ರಾಷ್ಟ್ರೀಯ ಶಿಕ್ಷಣ ನೀತಿ 2020 (NEP) ಅಡಿಯಲ್ಲಿ ಬರುವ ಎಲ್ಲ ಸ್ನಾತಕ ಪದವಿಯ 1 ಮತ್ತು 3 ನೇ ಸೆಮಿಸ್ಟರ್ ಲಿಖಿತ ಪರೀಕ್ಷೆಗಳ ವೇಳಾಪಟ್ಟಿಯನ್ನು ಪ್ರಕಟಿಸಿರುವುದಿಲ್ಲ. ಆದರೆ ಸಾಮಾಜಿಕ ಜಾಲತಾಣದಲ್ಲಿ WhatsApp ಮುಖಾಂತರ ಹರಿದಾಡುತ್ತಿರುವ ವೇಳಾಪಟ್ಟಿಯು ನಕಲಿ ವೇಳಾಪಟ್ಟಿಯಾಗಿರುತ್ತದೆ. ಈ ವೇಳಾಪಟ್ಟಿಯನ್ನು ಪರಿಗಣಿಸಬಾರದೆಂದು ತಿಳಿಸಲಾಗಿದೆ. ಶೀಘ್ರದಲ್ಲಿಯೇ ರಾಷ್ಟ್ರೀಯ ಶಿಕ್ಷಣ ನೀತಿ 2020 (NEP) ಅಡಿಯಲ್ಲಿ ಬರುವ ಎಲ್ಲ ಸ್ನಾತಕ ಪದವಿಯ 1 ಮತ್ತು 3 ನೇ ಸೆಮಿಸ್ಟರ್ ವೇಳಾಪಟ್ಟಿಯನ್ನು ಪ್ರಕಟಿಸಿ ಅಧಿಕೃತವಾಗಿ ಕ.ವಿ.ವಿ. ಅಂತರಜಾಲದಲ್ಲಿ ಹಾಗೂ ಮಹಾವಿದ್ಯಾಲಯಗಳ ಪ್ರಾಚಾರ್ಯರ ಇ–ಮೇಲ್ ವಿಳಾಸಕ್ಕೆ ಕಳುಹಿಸಲಾಗುವುದು. ಮುಂದುವರೆದು, ಹೆಚ್ಚಿನ ಮಾಹಿತಿಗಾಗಿ ದೂರವಾಣಿ ಸಂಖ್ಯೆ-0836–2215267/375 ಗೆ ಸಂಪರ್ಕಿಸಲು ತಿಳಿಸಲಾಗಿದೆ. ಈ ವಿಷಯವನ್ನು ಸಂಬಂಧಪಟ್ಟ ಎಲ್ಲ ಸಿಬ್ಬಂದಿಗಳಿಗೆ ಹಾಗೂ ವಿದ್ಯಾರ್ಥಿಗಳ ಗಮನಕ್ಕೆ ತರಲು ಸೂಚಿಸಲಾಗಿದೆ.

17/2/23
ಕುಲಸಚಿವರು(ಮೌಲ್ಯಮಾಪನ)

**ಸೂಚನೆ: ಲಿಖಿತ ಪರೀಕ್ಷೆಯ ವೇಳಾಪಟ್ಟಿಗಳನ್ನು ಅಧಿಕೃತವಾಗಿ ಕ.ವಿ.ವಿ.ಅಂತರಜಾಲದಲ್ಲಿ ಹಾಗೂ ಪ್ರಾಚಾರ್ಯರ ಇ–ಮೇಲ ವಿಳಾಸಕ್ಕೆ ರವಾನಿಸಿದ್ದನ್ನು ಮಾತ್ರ ಪರಿಗಣಿಸಲು ಸೂಚಿಸಲಾಗಿದೆ.**

ಗೆ,
ಕ.ವಿ.ವಿ. ವ್ಯಾಪ್ತಿಯಲ್ಲಿ ಬರುವ ಎಲ್ಲ ಮಹಾವಿದ್ಯಾಲಯಗಳ ಪ್ರಾಚಾರ್ಯರಿಗೆ.

ಪ್ರತಿ ಮಾಹಿತಿಗಾಗಿ:

1. ಮಾನ್ಯ ಕುಲಪತಿಗಳು/ಕುಲಸಚಿವರು(ಮೌಲ್ಯಮಾಪನ), ಆಪ್ತ ಕಾರ್ಯದರ್ಶಿಗಳು, ಕ.ವಿ.ವಿ.ಧಾರವಾಡ.
2. ಉಪಕುಲಸಚಿವರು/ಸಹಾಯಕ ಕುಲಸಚಿವರು, ಪರೀಕ್ಷಾ ವಿಭಾಗ ಕ.ವಿ.ವಿ., ಧಾರವಾಡ.
3. ಸಿಸ್ಟಮ್ ಅನಾಲಿಸ್ಟ್, ಪರೀಕ್ಷಾ ವಿಭಾಗ ಕ.ವಿ.ವಿ.ಧಾರವಾಡ.
4. ಎಲ್ಲ ಅಧೀಕ್ಷಕರು, ಪರೀಕ್ಷಾ ವಿಭಾಗ, ಕ.ವಿ.ವಿ.ಧಾರವಾಡ
5. ನಿರ್ದೇಶಕರು ಮಾಹಿತಿ ತಂತ್ರಜ್ಞಾನ ವಿಭಾಗ, ಕ.ವಿ.ವಿ.ಧಾರವಾಡ (ಅಂತರಜಾಲದಲ್ಲಿ ಪ್ರಕಟಿಸುವುದು)